# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ.

**ಸಿ.ಸಿ.ನಂ.775/2021**
**9 ನೇ ಮೇ 2023**

ಫಿರ್ಯಾದಿಃ- : ಪಾಂಡವಪುರ ಠಾಣಾ ಪೊಲೀಸರು

ಃ ವಿರುದ್ದ ಃ

ಆರೋಪಿಃ- : ನವೀನ.ಎಸ್ (32)
ಬಿನ್ ಸಣ್ಣಸ್ವಾಮೀಗೌಡ,
ವಾಸಃ ಎಂ.ಶೆಟ್ಟಿಹಳ್ಳಿ ಗ್ರಾಮ,
ಮೇಲುಕೋಟೆ ಹೋಬಳಿ,
ಪಾಂಡವಪುರ ತಾಃ ಮಂಡ್ಯ.

## ಆರೋಪಣೆ

**ಶ್ರೀ ಕಿಶೋರ್ ಕುಮಾರ್ ಕೆ.ಎನ್. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಪಾಂಡವಪುರ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ,**

ನಿಮ್ಮ ಮೇಲೆ ಹೊರಿಸುವ ಆರೋಪಣೆ ಏನೆಂದರೆಃ-

**ಮೊದಲನೆಯದಾಗಿಃ** ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ದಿನಾಂಕಃ 11.04.2021 ರಂದು ಸಂಜೆ ಸುಮಾರು 4.30 ಗಂಟೆಯ ಸಮಯದಲ್ಲಿ ಪಾಂಡವಪುರ ತಾಲ್ಲೂಕು, ಚಿನಕುರುಳಿ ಹೋಬಳಿ, ಯರೇಗೌಡನಹಳ್ಳಿ-ಎಂ.ಶೆಟ್ಟಿಹಳ್ಳಿ ರಸ್ತೆಯಲ್ಲಿ ರಮೇಶ್ ಎಂಬುವವರ ಜಮೀನಿನ ನೇರದಲ್ಲಿ ಆರೋಪಿಯುಸ್ಪ್ಲಂಡರ್ ಪ್ಲಸ್ ಮೋಟಾರ್ ಬೈಕ್ ನಂ.ಕೆಎ-11-ಇಆರ್-6556 ಕ್ಕೆ ಚಾಲಕನಾಗಿ, ಮೋಟಾರ್ ಸೈಕಲ್ ಹಿಂಬಾಗದಲ್ಲಿ ಚಾಸಾ-1 ರವರ ಮಗ ಎಸ್.ಕೆ.ನಾಗೇಶ ರವರನ್ನು ಕೂರಿಸಿಕೊಂಡು ಯರೇಗೌಡನಹಳ್ಳಿ ಕಡೆಯಿಂದ ಎಂ.ಶೆಟ್ಟಿಹಳ್ಳಿ ಕಡೆಗಾದಂತೆ ಅತಿವೇಗ ಮತ್ತು ಅಜಾಗರೂಕತೆಯಿಂದ ಮೋಟಾರ್ ಸೈಕಲನ್ನು ಓಡಿಸಿಕೊಂಡು ಹೋಗುತ್ತಿದ್ದಾಗ ಅಡ್ಡಲಾಗಿ ನಾಯಿ ಬಂದಿದ್ದರಿಂದ ನಿಯಂತ್ರಿಸಲಾಗದೆ ಬೈಕ್ ಸಮೇತ ಇಬ್ಬರು ಬಿದ್ದ ಪರಿಣಾಮ ಹಿಂಬದಿ ಸವಾರನಾದ ಚಾಸಾ-1 ರವರ ಮಗ ಎಸ್.ಕೆ.ನಾಗೇಶ ರವರ ಕುತ್ತಿಗೆ ಮೂಳೆ, ಬೆನ್ನು ಮೂಳೆಗೆ ತೀವ್ರ ಸ್ವರೂಪದ ಪೆಟ್ಟಾಗಿದ್ದು ಎಸ್.ಕೆ.ನಾಗೇಶ ರವರು ಮೈಸೂರಿನ ಬಾನವಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಈ ಅಪಘಾತದಿಂದ ಉಂಟಾದ ಪೆಟ್ಟುಗಳಿಗೆ ಹೊರ ರೋಗಿಯಾಗಿ ಚಿಕಿತ್ಸೆ ಪಡೆಯುತ್ತ ತಮ್ಮ

ಮನೆಯಲ್ಲಿರುವಾಗ ದಿನಾಂಕಃ 24.09.2021 ರಂದು ಚಾಸಾ-1 ರವರ ಮಗ ನಾಗೇಶ.ಎಸ್.ಕೆ ರವರಿಗೆ ಉಸಿರಾಟದ ತೊಂದರೆ ಉಂಟಾಗಿದ್ದರಿಂದ ಮೈಸೂರಿನ ಬಾನವಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದು ಕೊಂಡು ಹೋದಾಗ ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಮೈಸೂರಿನ ಬಾನವಿ ಆಸ್ಪತ್ರೆಯ ವೈದ್ಯರು ಪರೀಕ್ಷಿಸಿ ಚಾಸಾ-1 ರವರ ಮಗ ಎಸ್.ಕೆ.ನಾಗೇಶ ರವರು ಮೃತಪಟ್ಟಿರುತ್ತಾರೆ, **ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.**

1. ಕನ್ನಡದಲ್ಲಿ ಓದಿ ಹೇಳಿದ ಮೇಲ್ಕಂಡ ಆಪಾದನೆಯ ಸಂಗತಿಗಳು ನಿಮಗೆ ಅರ್ಥವಾಯಿತಾ?

ಉ ಃ

2. ಮೇಲ್ಕಂಡ ಆಪಾದನೆಯನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಯಾಗಬೇಕಾ?

ಉ ಃ

ಈ ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಕನ್ನಡದಲ್ಲಿ ಓದಿ ಹೇಳಿ ಆರೋಪಿತರು ಹೇಳಿದ ಉತ್ತರವನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ.

**(ಕಿಶೋರ್ ಕುಮಾರ್ ಕೆ.ಎನ್.)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಪಾಂಡವಪುರ.**

**ಆರೋಪಿ ಸಹಿಃ**